# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 456/2020

**ಸಾಕ್ಷಿಯನ್ನು ದಿಃ 31.10.2023 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಪ್ರಕಾಶ್ ಕಟ್ಟಿ | ಸಿ.ಡಬ್ಲ್ಯೂಃ **1** | ಪಿ.ಡಬ್ಲ್ಯೂಃ **1** |
| ತಂದೆಯ ಹೆಸರು | ಲೇಟ್ ರಾಮಪ್ಪ | | |
| ವಯಸ್ಸು | **49** ವರ್ಷ | | |
| ಕೆಲಸ | ಶಿಕ್ಷಕರು | | |
| ವಾಸಸ್ಥಳ | ಹುಣಸೂರು | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

1. 2019 ರಲ್ಲಿ ದಸರೆ ರಜೆಗೆಂದು ನಾನು ನನ್ನ ಊರಾದ ಅಥಣಿಗೆ ಹೋಗಿದ್ದು, ಆ ಸಮಯದಲ್ಲಿ ನಾನು ನನ್ನ ಮಕ್ಕಳ ಫಿ ಕಟ್ಟಲು ತಂದಿದ್ದ ಹಣ ಹಾಗೂ ಸ್ವಲ್ಪ ಚಿನ್ನ ಮನೆಯಲ್ಲಿ ಇಟ್ಟಿದ್ದೆ. ನನ್ನ ಮನೆಯಲ್ಲಿ ಕಳ್ಳತನ ಆಗಿದೆ ಎಂದು ನನ್ನ ಪಕ್ಕದ ಮನೆಯವರು ತಿಳಿಸಿದರು. ವಿಚಾರ ತಿಳಿದು ರಾತ್ರಿ ಊರಿನಿಂದ ಹೊರಟು ಮಾರನೆ ದಿನ ಬೆಳಿಗ್ಗೆ ಮನೆಗೆ ಬಂದು ನೋಡಿದಾಗ ನನ್ನ ಮನೆಯ ಮುಖ್ಯದ್ವಾರ ಹಾಗೂ ಬೀರುವಡನ್ನು ಹೊಡೆದು, ತೆರೆಯಲಾಗಿತ್ತು.

2. ನಾನು ನನ್ನ ಮನೆಗೆ ಹೋಗುವ ಮೊದಲು ಪೊಲೀಸರು ನನ್ನ ಮನೆಗೆ ಹೋಗಿ ನೋಡಿದ್ದರು. ನಾನು ನನ್ನ ಮನೆಯ ಬೀರುವಿನಲ್ಲಿ ಇಟ್ಟಿದ್ದ ಒಂದು ಚಿನ್ನದ ಬ್ರಾಸ್ಲೆಟ್, 5 ಗ್ರಾಂನ ಎರಡು ಚಿನ್ನದ ಉಂಗುರುಗಳು, 3 ಗ್ರಾಂನ ಒಂದು ಜೊತೆ ಚಿನ್ನದ ಕಿವಿ ಓಲೆಗಳು, ಅಂದಾಜು 250 ಗ್ರಾಂನ ಬೆಳ್ಳಿಯ ಮುಖವಾಡ, ಬೆಳ್ಳಿಯ ಉಡುದಾರ, ಒಂದು ಜೊತೆ ಬೆಳ್ಳಿಯ ದೀಪದ ಕಂಬಗಳು, ಹಾಗೂ 8,000/- ಸಾವಿರ ನಗದು ಹಣ ಕಳ್ಳತನ ಆಗಿತ್ತು. ನಂತರ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

3. ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ. ದಾಖಲೆ ಸ್ಥಳ ಮಹಜರ್ ಆಗಿದ್ದು ಅದನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2 ಎಎಂದು ಗುರುತಿಸಲಾಯಿತು. ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ನನ್ನ ಮನೆಗೆ ಮಧ್ಯಾಹ್ಣ 12 ರಿಂದ 1.00 ಗಂಟೆವರೆಗೆ ಮಹಜರ್ ಜರುಗಿಸಿ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯ ಚಾಸಾ-2,3 ರವರು ಸಹಿ ಮಾಡಿರುತ್ತಾರೆ.

4. ಕಳ್ಳತನವಾದ ಒಂದು ವಾರದ ನಂತರ ಪೊಲೀಸರು ನನಗೆ ಕರೆ ಮಾಡಿ ಕಳ್ಳತನವಾದ ಒಡವೆಗಳು ಸಿಕ್ಕಿವೆ ಎಂದು ನನ್ನನ್ನು ಠಾಣೆಗೆ ಬರಲು ತಿಳಿಸಿದರು. ನ್ಯಾಯಾಲಯದ ಮುಂದಿರುವ ಒಂದು ಬೆಳ್ಳಿ ತಟ್ಟೆ, ಒಂದು ಬೆಳ್ಳಿ ಉಡುದಾರ, ಒಂದು ಜೊತೆ ಚಿನ್ನದ ಕಿವಿ ಓಲೆ, ಒಂದು ಚಿನ್ನದ ಬ್ರಾಸ್ ಲೇಟ್, ಒಂದು ಚಿನ್ನದ ಬಿಳಿ ಹರಳಿನ ಉಂಗುರ, ಒಂದು ಬೆಳ್ಳಿ ಮುಖವಾಡ, ಎರಡು ಬೆಳ್ಳಿ ಕಂಬಗಳು ಒಟ್ಟು 7 ಭಾವಚಿತ್ರಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸಿ.ಡಿ ಇಲ್ಲದ ಕಾರಣ ಅವುಗಳನ್ನು ನಿಶಾನೆಗೊಳಪಡಿಸಿಲ್ಲ. ಆ ಸಮಯದಲ್ಲಿ ಪೊಲೀಸರು ಸದರಿ ವಸ್ತುಗಳನ್ನು ನನಗೆ ಬಿಟ್ಟರೆ ಬೇರೆ ಯಾರಿಗೂ ತೋರಿಸಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಭಾಗಶಃ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

## ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ

5. ಆ ದಿನ ಪೊಲೀಸರು ನನ್ನನ್ನು ಠಾಣೆಗೆ ಕರೆಯಿಸಿ, ನನ್ನ ಮನೆಯಿಂದ ಕಳ್ಳತನವಾದ ಒಡವೆಗಳನ್ನು ತೋರಿಸಿ, ಅದೇ ಸಮಯ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ತೋರಿಸಿ, ಸದರಿ ವಸ್ತುಗಳನ್ನು ಕಳ್ಳತನ ಮಾಡಿರುತ್ತಾನೆ ಎಂದು ತಿಳಿಸಿರುತ್ತಾರೆ ಎಂದರೆ ಸರಿ.

## ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀಮತಿ ಪಿ.ಜೆ.ಅವರಿಂದ–

6. ಕಳ್ಳತನ ಯಾರು ಮಾಡಿರುತ್ತಾರೆ ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ.2 ಮಹಜರ್ ನಲ್ಲಿ ಏನು ಬರೆದಿದೆ ನನಗೆ ಗೊತ್ತಿಲ್ಲ ಎಂದರೆ ಸರಿ. ಆರೋಪಿಯು ಯಾವುದೇ ಕಳ್ಳತನ ಮಾಡದೆ ಇದ್ದರೂ ಸಹ ಆರೋಪಿಗೆ ತೊಂದರೆ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. .

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.